# ಶ್ರೀಕೃಷ್ಣಕರ್ಣಾಮೃತದಿಂದ

**ಪರಮಿಮಮುಪದೇಶಮಾದ್ರಿಯಧ್ವಂ**
**ನಿಗಮ ವನೇಷು ನಿತಾಂತ ಚಾರ ಖಿನ್ನಾಃ ।**
**ವಿಚಿನುತ ಭವನೇಷು ವಲ್ಲವೀನಾಂ**
**ಉಪನಿಷದರ್ಥಮುಲೂಖಲೇ ನಿಬದ್ಧಮ್ ॥ ೧ ॥**

ವೇದದ ಕಾಡುಗಳಲ್ಲಿ ಬಹು ಸುತ್ತಿ ಸೋತಿರುವವರೇ, ಈ ಅತ್ಯುತ್ತಮ ಉಪದೇಶವನ್ನು ಆದರಿಸಿರಿ. ಉಪನಿಷತ್ತುಗಳ ಉದ್ದಿಷ್ಟವಸ್ತುವನ್ನು ಗೊಲ್ಲತಿಯರ ಮನೆಗಳಲ್ಲಿ ಒರಳಿಗೆ ಕಟ್ಟಿ ಹಾಕಿದೆ; ಅದನ್ನು ಅಲ್ಲಿ ಅರಸುವರಾಗಿ.

**ದೇವಕೀತನಯ ಪೂಜನಪೂತಃ**
**ಪೂತನಾರಿಚರಣೋದಕ ಧೌತಃ ।**
**ಯದ್ಯಹಂ ಸ್ಮೃತಧನಂಜಯಸೂತಃ**
**ಕಿಂ ಕರಿಷ್ಯತಿ ಸ ಮೇ ಯಮದೂತಃ ॥ ೨ ॥**

ನಾನು ದೇವಕೀತನಯನ ಪೂಜನದಿಂದ ಪೂತನೂ ಪೂತನೆಯ ಹಗೆಯ ಚರಣೋದಕದಿಂದ ಶುದ್ಧನೂ ಸಾರಥಿಯನ್ನು ನೆನೆದವನೂ ಅಹುದಾದರೆ ಆ ಯಮದೂತನು ನನ್ನನ್ನು ಏನು ಮಾಡುವನು?

**ಭಾಸತಾಂ ಭವಭಯೈಕ ಭೇಷಜಂ**
**ಮಾನಸೇ ಮಮ ಮುಹುರ್ಮುಹುರ್ಮುಹುಃ ।**
**ಗೋಪವೇಷಮುಪಸೇದುಷಃ ಸ್ವಯಂ**
**ಯಾಪಿ ಕಾಪಿ ರಮಣೀಯತಾ ವಿಭೋಃ ॥ ೩ ॥**



ತಾನಾಗಿ ಗೋಪಾಲವೇಷವನ್ನು ಧರಿಸಿದ ಒಡೆಯನ ಯಾವುದೋ ಆ ಅವರ್ಣನೀಯ ರಮಣೀಯತೆ, ಭವಭಯಕ್ಕೆ ಏಕಮಾತ್ರ ಔಷಧವಾದದ್ದು, ನನ್ನ ಮನಸ್ಸಿನಲ್ಲಿ ಮರಮರಳಿ ಮರಳಿ ಪ್ರಕಾಶಿಸಲಿ.

— ಲೀಲಾಶುಕ

## ಸೂಕ್ತಿಪ್ರಭ

**ಆ**ಸೆ ಆತಂಕಗಳಿಲ್ಲದ ಅನಂತವ್ಯಾಪ್ತಿಯ ಸ್ಥಿತಿ ಎಷ್ಟು ಅದ್ಭುತವಾದುದು! ಈ ಭಾವನೆಯೇ ಮನಸ್ಸನ್ನು ಮೇಲೆತ್ತುವುದು. ಕೆಲವು ಸಾಧಕರು ನಿತ್ಯವು ಲೀಲೆಯಿಂದ ಬೇರೆ ಎಂದು ಭಾವಿಸುವರು. ಮತ್ತೆ ಕೆಲವರು ಎರಡೂ ಒಂದೇ ಎಂದು ಭಾವಿಸುವರು. ಮತ್ತೊಂದು ಆಧ್ಯಾತ್ಮಿಕ ಅನುಭವ ನಿತ್ಯ ಮತ್ತು ಲೀಲೆ ಎರಡನ್ನೂ ಮೀರಿರುವುದು.

— ಸ್ವಾಮಿ ಬ್ರಹ್ಮಾನಂದ

**ಬ**ಟ್ಟೆಯು ಯಾವ ಬಣ್ಣದ್ದು, ಯಾವ ಗುಣಮಟ್ಟದ್ದು, ಅದರ ಆಕಾರ ಯಾವುದು ಎಂದೆಲ್ಲ ಚಿಂತಿಸುತ್ತಾ ಸಾಗಿದಂತೆ ಅದರ ಮೂಲವಾದ ದಾರದಲ್ಲಿಯೇ ಮನಸ್ಸು ಹೋಗಿ ನಿಲ್ಲುತ್ತದೆ. ಅದೇ ರೀತಿ ಈ ಪ್ರಪಂಚವನ್ನು ಕುರಿತು ನಾನಾ ಚಿಂತನೆ ನಡೆಸುತ್ತ ಕೊನೆಗೆ ಆತ್ಮನಲ್ಲಿಯೇ ಕೊನೆಗಾಣಬೇಕಾಗುವುದು.

— ಯೋಗವಾಸಿಷ್ಠ

**ಮಾ**ಯೆಯ ಒಳಗಿರುವ ಆನಂದ ಎಷ್ಟೊಂದು ಮಧುರ ಎಂಬುದು ನಿನಗೆ ಗೊತ್ತು. ಸಾಮಾನ್ಯ ಜನರು ಇದರಿಂದ ಮರುಳಾಗುವರು. ಆದರೆ, ಈ ಮಾಯೆ ಯಾರಿಗೆ ಸೇರಿದ್ದೋ, ಆ ಭಗವಂತನು ಇನ್ನೆಷ್ಟು ಅತ್ಯದ್ಭುತ ಮಧುರತರ ಎಂಬುದನ್ನು ಅವರು ಒಂದು ಕ್ಷಣವೂ ಯೋಚಿಸಲಾರರು.

— ಸ್ವಾಮಿ ಅದ್ಭುತಾನಂದ

**ನಾ**ವು ನೋಡಬೇಕಾಗಿರುವುದು ಏನೆಂದರೆ, ಮಗು ಅರಿವಿನ ಬೆನ್ನುಹತ್ತಿ ಹೋಗಬೇಕಾಗಿದೆ ಎಂಬುದನ್ನು. ಅರಿವು ಮಗುವಿನ ಬೆನ್ನುಹತ್ತಿ ಹೋಗುವುದನ್ನಲ್ಲ.

— ಜಾರ್ಜ್ ಬರ್ನಾಡ್ ಷಾ

**ಕೈ**ಚೆಲ್ಲಿ ಬಿಟ್ಟುಬಿಡುವುದು ತುಂಬ ಸುಲಭ. ಆದರೆ, ಎಲ್ಲ ಚೆದುರಿಹೋದ ಸಂಗತಿಗಳನ್ನು ಒಟ್ಟುಸೇರಿಸಿ ಹಿಡಿದಿಡುವುದು ನಿಜವಾದ ಧೈರ್ಯ, ಶಕ್ತಿ.

— ಅಜ್ಞಾತ